ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ

**CC-27/2016**

**CW-76**
**PW-60**

**ಹೆಸರುಃ** ರಾಜಪ್ಪ

**ತಂದೆಃ** ಕೊಟ್ರಪ್ಪ .

**ವಯಸ್ಸುಃ** **54** ವರ್ಷ.

**ಕೆಲಸಃ** ವ್ಯವಸಾಯ.

**ವಾಸಃ** ಯಲವಟ್ಟಿ ಗ್ರಾಮ, ಹರಿಹರ .

ಇಂದು ದಿನಾಂಕ**:16-09-2025** ರಂದು ಸಾಕ್ಷಿಯನ್ನು **ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಸ.ಸ ರವರಿಂದ ಅಭಿಯೋಜನೆ ಪರಃ

ಚಾ. ಸ 78 ಗೊತ್ತು, ಚಾ.ಸ 22 ಇವರ ಪರಿಚಯ ಇದೆ. ಚಾ.ಸ 21, 25 ಮತ್ತು 26, 77 ಸಹ ನಮ್ಮೂರಿನವರು ಇರುತ್ತಾರೆ. ಹಾಜರು ಇರುವ ಆರೋಪಿಯನ್ನು ಈ ಹಿಂದೆ ನೋಡಿದ್ದೇನೆ. ಆತನ ಪರಿಚಯ ಇದೆ. ಆತ ಭತ್ತದ ವ್ಯಾಪಾರ ಮಾಡುತ್ತಾನೆ. ದಿನಾಂಕಃ01-06-2010 ರಂದು ಚಕ್ಕಡಿ ಚಂದ್ರಪ್ಪ ಎಂಬ ಜಗಳಿ ಗ್ರಾಮದ ಏಜೆಂಟ್, ಈತ ನಮ್ಮಿಂದ ಭತ್ತವನ್ನು ಖರೀದಿ ಮಾಡಿ, ಆರೋಪಿಗೆ ಮಾರಾಟ ಮಾಡಿದ್ದನು. ನನ್ನದು 147 ಚೀಲ ಭತ್ತ ಆರೋಪಿಗೆ ಮಾರಾಟ ಮಾಡಿದ್ದೆನು. ಅದು ಸುಮಾರು 120 ಕ್ವಿಂಟಲ್ ಇತ್ತು. ಪ್ರತಿ ಕ್ವಿಂಟಲ್ ಗೆ ರೂ.1500/- ಎಂದು ಬೆಲೆ ನಿಗದಿ ಆಗಿತ್ತು. ನನಗೆ ರೂ.10 ಸಾವಿರ ಮುಂಗಡ ಹಣಕೊಟ್ಟಿದ್ದರು, ಉಳಿದ ಹಣವನ್ನು ಒಂದುವರೆ ತಿಂಗಳಲ್ಲಿ ಕೊಡುವುದಾಗಿ ಹೇಳಿದ್ದನು. ನಂತರ ಆರೋಪಿ ಹಣಕೊಡಲಿಲ್ಲ. ಆತ ಊರು ಬಿಟ್ಟು ಹೋಗಿದ್ದಾನೆ ಎಂದು ಗೊತ್ತಾಯಿತು. ನಂತರ ರೈತರು ಎಲ್ಲರೂ ಸೇರಿ

ಪಿರ್ಯಾದಿಕೊಟ್ಟೇವು. ಚಾ.ಸ 1 ಪಿರ್ಯಾದಿ ಕೊಟ್ಟರು, ನಾನು ಪೋಲೀಸರಿಗೆ ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಕೇಳಿದ್ದು, ಸಕಾರಣ ಇಲ್ಲದೇ ಸಮಯಕೇಳಿದ ಕಾರಣ, ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**